# BGS NANDI RUN - 2024













|| Jai Sri Gurudev ||
Sri Adichunchanagiri Shikshana Trust (R.)
SJC INSTITUTE OF TECHNOLOGY
VTU Affiliated, AICTE Approved, Accredited by NBA (CSE, ISE, ECE, ME, CV, AE) & NAAC with A+ Grade, NIRF (151-300), Gold rated by QS i-Gauge
Chikkaballapura - 562 101, Karnataka
Department of Physical Education & Sports
2nd
BGS Nandi Run-2024
My Health, My Right


|| Jai Sri Gurudev ||
Sri Adichunchanagiri Shikshana Trust (R.)
SJC INSTITUTE OF TECHNOLOGY
VTU Affiliated, AICTE Approved, Accredited by NBA (CSE, ISE, ECE, ME, CV, AE) &
NAAC with A+ Grade, NIRF (151-300), Gold rated by QS I-Gauge
Chikkaballapura - 562 101, Karnataka
Department of Physical Education & Sports


|| Jai Sri Gurudev ||
Sri Adichunchanagiri Shikshana Trust (R.)
SJC INSTITUTE OF TECHNOLOGY
VTU Affiliated, AICTE Approved, Accredited by NBA (CSE, ISE, ECE, ME, CV, AE) &
NAAC with A+ Grade, NIRF (151-300), Gold rated by QS I-Gauge
Chikkaballapura - 562 101, Karnataka
Department of Physical Education & Sports
2nd
Nandi




ಕನ್ನಡಪ್ರಭ

ಆರೋಗ್ಯ ರಕ್ಷಣೆ | ಗುಡ್ಡಗಾಡು ಓಟಕ್ಕೆ ಹಸಿರು ನಿಶಾನೆ ತೋರಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ

# ಉತ್ತಮ ಆರೋಗ್ಯಕ್ಕಾಗಿ ವ್ಯಾಯಾಮ ಮಾಡಬೇಕು

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಮಾನವನ ಶರೀರ ಆರೋಗ್ಯವಾಗಿರಬೇಕಿದ್ದಲ್ಲಿ ವ್ಯಾಯಾಮ ಅಗತ್ಯ. ಇಂದು ಭಾರತವನ್ನು ಯೋಗದಲ್ಲಿ ವಿಶ್ವದಲ್ಲಿ ಗುರುತಿಸಿದೆ. ಇಂತಹ ಓಟಗಳ ಮೂಲಕ ಮನುಷ್ಯ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ದೇಶದಲ್ಲಿ ತಾಂಡವವಾಡುತ್ತಿರುವ ಆರೋಗ್ಯ ಸಮಸ್ಯೆಗಳು ದೂರವಾಗಲಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ತಿಳಿಸಿದರು.

ನಗರ ಹೊರವಲಯದ ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದ ಬಿಜಿಎಸ್ ಮೈದಾನದಲ್ಲಿ ಶನಿವಾರ ಮುಂಜಾನೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿದ್ದ ನನ್ನ ಆರೋಗ್ಯ ನನ್ನ ಹಕ್ಕು ಎಂಬ ಘೋಷವಾಕ್ಯದೊಂದಿಗೆ ಬಿ.ಜಿ.ಎಸ್ ನಂದಿ ಓಟ 2024 ರ 5 ಕಿ.ಮೀ ಮತ್ತು 10 ಕಿ.ಮೀ ಗುಡ್ಡಗಾಡು ಓಟಕ್ಕೆ ಹಸಿರು ನಿಶಾನೆ ತೋರಿಸಿ ಮಾತನಾಡಿದರು.



**ಭೂಮಿ ರಕ್ಷಣೆ ಎಲ್ಲರ ಹೊಣೆ:** ನಾವು ವಾಸವಾಗಿರುವ ಭೂತಾಯಿಯ ಸಂರಕ್ಷಣೆ ನಮ್ಮದೇ ಹೊಣೆಗಾರಿಕೆಯಾಗಿದೆ. ಹಾಗಾಗಿ ನಾವೆಲ್ಲರೂ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಿಸಬೇಕಿದೆ. ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಪರಿಸರ ರಕ್ಷಣೆಯ ದಿವ್ಯ ಸಂಕಲ್ಪ ಮಾಡಬೇಕು. ಇದು ಒಬ್ಬರ ಕೆಲಸವಲ್ಲ, ಎಲ್ಲರ ಕೆಲಸವಾಗಿದೆ ಎಂದು ಹೇಳಿದರು. ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಜಿ.ಟಿ.ರಾಜು, ಎಸ್‌ಜೆಸಿಐಟಿ ಕುಲಸಚಿವ ಜಿ.ಸುರೇಶ್ ಮಾತನಾಡಿದರು. ನಂದಿ ಓಟ 2024 ರ ಓಟದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರುಗಳು ಸೇರಿದಂತೆ ಸುಮಾರು 1000ಕ್ಕೂ ಹೆಚ್ಚು ಸ್ಪರ್ಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ 10 ಕಿ.ಮೀ ಓಟದಲ್ಲಿ ಮಂಡ್ಯದ ವೆಂಕಟೇಶ ಕೆ.ಕೆ. ಮೊದಲ ಬಹುಮಾನ, ಬೆಂಗಳೂರಿನ ಗುರುಪ್ರಸಾದ್ ಎರಡನೇ ಬಹುಮಾನ ಮತ್ತು ಅಭಿಷೇಕ್ ಎನ್ ಮೂರನೇ ಬಹುಮಾನ ಪಡೆದು ವಿಜೇತರಾದರು. 5 ಕಿ.ಮೀ ಓಟದಲ್ಲಿ ದೊಡ್ಡಬಳ್ಳಾಪುರದ ಪ್ರಗತಿ ಪ್ರಥಮ ಬಹುಮಾನ, ತೇಜಸ್ವಿನಿ ಎನ್.ಎಲ್, ಕೂರ್ಗ್ ಎರಡನೇ ಬಹುಮಾನ, ಬೆಂಗಳೂರಿನ ರಾಶಿ ಮೂರನೇ ಬಹುಮಾನ ಪಡೆದು ವಿಜೇತರಾದರು. ಎಲ್ಲ ವಿಜೇತರಿಗೆ ನಗದು ಬಹುಮಾನ ನೀಡಲಾಯಿತು. ಈ ವೇಳೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಡಿ.ವೈ.ಎಸ್.ಪಿ ಮಂಜುನಾಥ್, ಜಿಲ್ಲಾಸ್ಪತ್ರೆಯ ವೈದ್ಯ ಡಾ. ವಿಜಯ,ಎಸ್ ಜೆ ಸಿ ಐ ಟಿ ವ್ಯವಸ್ಥಾಪಕ ಜೆ.ಆರ್.ರಂಗಸ್ವಾಮಿ, ಬಿ.ಜಿ.ಎಸ್.ಸಿ.ಐ.ಟಿ ಪ್ರಾಂಶುಪಾಲ ಡಾ.ಜಿ.ಕೆ.ರವಿಕುಮಾರ್,ಬಿ.ಜಿ.ಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ.ವೈ.ಆರ್ ಮಂಜುನಾಥ್, ಮತ್ತಿತರರು ಇದ್ದರು.

# ಮಾನಸಿಕ, ದೈಹಿಕ ಆರೋಗ್ಯಕ್ಕೆ ಓಟ ಸಹಕಾರಿ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ



ಚಿಕ್ಕಬಳ್ಳಾಪುರ ಹೊರವಲಯದ ಎಸ್‌ಜೆಸಿಐಟಿಯಲ್ಲಿ ಬಿಜಿಎಸ್ ನಂದಿ ಓಟ 2024ಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಭಾನುವಾರ ಚಾಲನೆ ನೀಡಿ, ಸ್ಪರ್ಧಿಗಳ ಜತೆ ತಾವೂ ಓಡಿದರು.

ಪ್ರತಿಯೊಬ್ಬರೂ ಪ್ರತಿನಿತ್ಯ ಓಡುವುದು ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಸಹಕಾರಿ. ಹೀಗಾಗಿ ಎಲ್ಲರೂ ತಪ್ಪದೇ ಒಂದಿಲ್ಲೊಂದು ಕ್ರೀಡೆ, ವ್ಯಾಯಾಮಗಳಲ್ಲಿ ತೊಡಗಿಕೊಳ್ಳಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಹೇಳಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ವಿಶ್ವವಿದ್ಯಾಲಯದ ಬಿಜಿಎಸ್ ಗ್ರೌಂಡ್‌ನಿಂದ ''ನನ್ನ ಆರೋಗ್ಯ ನನ್ನ ಹಕ್ಕು'' ಘೋಷವಾಕ್ಯ ದೊಂದಿಗೆ ಭಾನುವಾರ ಏರ್ಪಡಿಸಿದ್ದ 10 ಕಿ.ಮೀ. ಮತ್ತು 5 ಕಿ.ಮೀ ಬಿಜಿಎಸ್ ನಂದಿ ಓಟ 2024ಕ್ಕೆ ಚಾಲನೆ ನೀಡಿ ಸ್ವತಃ ಓಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯರು ಕ್ರಿಯಾಶೀಲವಾಗಿರಬೇಕಾದರೆ

**ಬಿ.ಜಿ.ಎಸ್. ನಂದಿ ಓಟ 2024ಕ್ಕೆ ಚಾಲನೆ ನೀಡಿ ಮಾತನಾಡಿದ ಎಸ್‌ಪಿ ಕುಶಲ್ ಚೌಕ್ಸೆ**

ದಿನನಿತ್ಯ ವ್ಯಾಯಾಮ, ಓಟ, ಕ್ರೀಡೆಗಳಲ್ಲಿ ಭಾಗವಹಿಸಬೇಕು. ಆಗ ಒತ್ತಡರಹಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಎಸ್‌ಜೆಸಿಐಟಿ ವತಿಯಿಂದ ನಂದಿ ಓಟ ನಡೆಸುತ್ತಿರುವುದು ಸ್ವಾಗತಾರ್ಹ. ಇಂತಹ ಕಾರ್ಯಕ್ರಮಗಳಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

**ಸದೃಢರಾಗಲು ಸಾಧ್ಯ :** ಡಿವೈಎಸ್‌ಪಿ ಮಂಜುನಾಥ್ ಮಾತನಾಡಿ, ಓಟ ಉತ್ತಮ ಆರೋಗ್ಯಕ್ಕೆ ತುಂಬಾ ಆವಶ್ಯಕ. ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ನನಗೆ ತುಂಬಾ ಸಂತಸ ತಂದಿದೆ. ಇದು ಅತ್ಯುತ್ತಮ ಕಾರ್ಯ ಕ್ರಮವಾಗಿದ್ದು, ಆರೋಗ್ಯ ರಕ್ಷಣೆಗೆ ಇಂತಹ ಕಾರ್ಯಕ್ರಮಗಳು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು. ಇದರಿಂದ ಮಾನಸಿಕ ಮತ್ತು ದೈಹಿಕವಾಗಿ ಮತ್ತಷ್ಟು ಸದೃಢರಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಎಸ್‌ಜೆಸಿಐಟಿ ಪ್ರಿನ್ಸಿಪಾಲ್ ಡಾ.ಜಿ.ಟಿ.ರಾಜು ಮಾತನಾಡಿ, ಕಳೆದ 37 ವರ್ಷಗಳಿಂದ ಸಾವಿರಾರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ರೂಪಿಸಿ, 64 ಎಕರೆ ಸುಸಜ್ಜಿತವಾದ ಆವರಣವನ್ನು ನಮ್ಮ ಕಾಲೇಜು ಹೊಂದಿದೆ. 2024-25ನೇ ಶೈಕ್ಷಣಿಕ ವರ್ಷದಿಂದ ಸ್ವಾಯತ್ತ ಸಂಸ್ಥೆಯಾಗಿ ಮಾನ್ಯತೆ ಪಡೆದಿದೆ. ನಿಂತ ನೀರು ಕೊಳೆಯುತ್ತದೆ, ಹರಿಯುವ ನೀರು ಶುದ್ಧಿಯಾಗುತ್ತದೆಂದು ವಿದ್ಯಾರ್ಥಿಗಳು ಸದಾ ಹರಿಯುವ ನೀರಿನಂತೆ ಮುಂದೆ ಸಾಗಬೇಕು ಎಂದರು.

ಆರೋಗ್ಯದ ಓಟದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ಸೇರಿದಂತೆ ಸುಮಾರು ಸಾವಿರಕ್ಕೂ ಹೆಚ್ಚು ಸ್ಪರ್ಧಿಗಳು ಓಟದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ 10 ಕಿ.ಮೀ. ಓಟದಲ್ಲಿ ಮಂಡ್ಯದ ಕೆ.ಕೆ. ವೆಂಕಟೇಶ್ ಮೊದಲ ಬಹುಮಾನ, ಬೆಂಗಳೂರಿನ ಗುರುಪ್ರಸಾದ್ 2ನೇ ಬಹುಮಾನ ಮತ್ತು ಬೆಂಗಳೂರಿನ ಗಣಪತಿ ಮೂರನೇ ಬಹುಮಾನ ಪಡೆದರು. 5 ಕಿ.ಮೀ. ಮಹಿಳಾ ಓಟದಲ್ಲಿ ದೊಡ್ಡಬಳ್ಳಾಪುರದ ಪ್ರಣತಿ ಪ್ರಥಮ ಬಹುಮಾನ, ಕೊಡಗಿನ ಎನ್.ಎಲ್.ತೇಜಸ್ವಿನಿ 2ನೇ ಬಹುಮಾನ, ಬೆಂಗಳೂರಿನ ರಾಶಿ 3ನೇ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ಎಸ್‌ಜೆಸಿಐಟಿ ಕುಲಸಚಿವ ಜೆ.ಸುರೇಶ್, ಎಸ್‌ಜೆಸಿಐಟಿ ವ್ಯವಸ್ಥಾಪಕ ಜಿ.ಆರ್. ರಂಗಸ್ವಾಮಿ, ಬಿಜಿಎಸ್‌ಸಿಐಟಿ ಪ್ರಿನ್ಸಿಪಾಲ್ ಡಾ.ಜಿ.ಕೆ.ರವಿಕುಮಾರ್, ಬಿಜಿಎಸ್ ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಡಾ.ವೈ.ಆರ್.ಮಂಜುನಾಥ್, ಬಿಜಿಎಸ್‌ಬಿಪಿಎಡ್ ಪ್ರಿನ್ಸಿಪಾಲ್ ಶಿವಶಂಕರ್, ಎಸ್‌ಜೆಸಿಐಟಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಟಿ.ಚಂದನ್ ಹಾಗೂ ನಾನಾ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು.

---

**ಪ್ರಜಾವಾಣಿ**

# ಓಟದಲ್ಲಿ ಸಾವಿರಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ

## 'ಬಿ.ಜಿ.ಎಸ್ ನಂದಿ ಓಟ 2024'; ವೆಂಕಟೇಶ್, ಪ್ರಣತಿಗೆ ಮೊದಲ ಬಹುಮಾನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯದಿಂದ ಶನಿವಾರ 'ನನ್ನ ಆರೋಗ್ಯ ನನ್ನ ಹಕ್ಕು' ಎಂಬ ಘೋಷವಾಕ್ಯದೊಂದಿಗೆ 'ಬಿ.ಜಿ.ಎಸ್ ನಂದಿ ಓಟ 2024' ಸ್ಪರ್ಧೆ ನಡೆಯಿತು.

ಪುರುಷರಿಗೆ 10 ಕಿ.ಮೀ ಮತ್ತು ಮಹಿಳೆಯರಿಗೆ 5 ಕಿ.ಮೀ ಓಟದ ಸ್ಪರ್ಧೆ ನಡೆಯಿತು. ಬಿಜಿಎಸ್ ಕ್ರೀಡಾಂಗಣದ ಬಳಿ ಬೆಳಿಗ್ಗೆ 6.15ಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸಿ ಓಟಕ್ಕೆ ಚಾಲನೆ ನೀಡಿದರು.

10 ಕಿ.ಮೀ ಓಟದಲ್ಲಿ ಮಂಡ್ಯದ ವೆಂಕಟೇಶ ಕೆ.ಕೆ ಮೊದಲ ಬಹುಮಾನ, ಬೆಂಗಳೂರಿನ ಗುರುಪ್ರಸಾದ್ ದ್ವಿತೀಯ ಮತ್ತು ಗಣಪತಿ ತೃತೀಯ ಬಹುಮಾನ ಪಡೆದರು. 5 ಕಿ.ಮೀ ಮಹಿಳಾ ಓಟದ ಸ್ಪರ್ಧೆಯಲ್ಲಿ ದೊಡ್ಡಬಳ್ಳಾಪುರದ ಪ್ರಣತಿ ಪ್ರಥಮ ಬಹುಮಾನ, ಕೊಡಗಿನ ತೇಜಸ್ವಿನಿ ಎನ್.ಎಲ್ ದ್ವಿತೀಯ ಮತ್ತು ಬೆಂಗಳೂರಿನ ರಾಶಿ ತೃತೀಯ ಬಹುಮಾನ ಪಡೆದರು.

ಡಿವೈಎಸ್‌ಪಿ ಮಂಜುನಾಥ್, ವಿಜಯ, ಎಸ್‌ಜೆಸಿಐಟಿ ಪ್ರಾಂಶುಪಾಲ ಜಿ.ಟಿ ರಾಜು, ಕುಲಸಚಿವ ಸುರೇಶ ಜೆ., ಎಸ್‌ಜೆಸಿಐಟಿ ವ್ಯವಸ್ಥಾಪಕ ಜಿ.ಆರ್ ರಂಗಸ್ವಾಮಿ, ಬಿ.ಜಿ.ಎಸ್.ಸಿ.ಇ.ಟಿ ಪ್ರಾಂಶುಪಾಲ ರವಿಕುಮಾರ್ ಜಿ.ಕೆ, ಬಿಜಿಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ವೈ.ಆರ್ ಮಂಜುನಾಥ್, ಬಿಪಿಇಡಿ ಪ್ರಾಂಶುಪಾಲ ಶಿವಶಂಕರ್, ಎಸ್.ಜೆ.ಸಿ.ಐ.ಟಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಟಿ.ಚಂದನ್ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು ಸಹ ಓಟದಲ್ಲಿ ಭಾಗವಹಿಸಿದ್ದರು.

ಡಿ.ವೈ.ಎಸ್.ಪಿ ಮಂಜುನಾಥ್ ಮಾತನಾಡಿ, ಓಟ ಉತ್ತಮ ಆರೋಗ್ಯಕ್ಕೆ ತುಂಬಾ ಅವಶ್ಯ. ಸ್ಪರ್ಧೆಯಲ್ಲಿ ಭಾಗವಹಿಸಿದ್ದು ತುಂಬಾ ಸಂತಸ ತಂದಿದೆ ಎಂದರು.

ಎಸ್.ಜೆ.ಸಿ.ಐ.ಟಿ ಪ್ರಾಂಶುಪಾಲ ಜಿ.ಟಿ ರಾಜು ಮಾತನಾಡಿ, ನಮ್ಮ ಸಂಸ್ಥೆಗಳ ಸಮೃದ್ಧಿಗೆ ಬಾಲಗಂಗಾಧರನಾಥ ಸ್ವಾಮೀಜಿ ಅವರ ಸಂಕಲ್ಪ, ನಿರ್ಮಲಾನಂದನಾಥ ಸ್ವಾಮೀಜಿ ಅವರ ದಿವ್ಯಾಲೋಚನೆಗಳು ಪ್ರೇರಣೆ ಎಂದರು.

ಬಿಜಿಎಸ್ ಎಂಬುದು ಧೈರ್ಯ ಮತ್ತು ಶಕ್ತಿ. ಸ್ವಾಮೀಜಿ ಅವರ ಆಶೀರ್ವಾದದೊಂದಿಗೆ 37 ವರ್ಷಗಳಿಂದ ಸಾವಿರಾರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ರೂಪಿಸಿದೆ. 64 ಎಕರೆ ಸುಸಜ್ಜಿತವಾದ ಆವರಣವನ್ನು ಹೊಂದಿದೆ ಎಂದು ಹೇಳಿದರು.

ನಿಂತ ನೀರು ಕೊಳೆಯುತ್ತದೆ, ಹರಿಯುವ ನೀರು ಶುದ್ದಿಯಾಗುತ್ತದೆ. ವಿದ್ಯಾರ್ಥಿಗಳು ಸದಾ ಹರಿಯುವ ನೀರಿನಂತೆ ಮುಂದೆ ಸಾಗಬೇಕು. ಸ್ವಾಮೀಜಿಯವರ ಆರೋಗ್ಯ ಸೇವೆ ಎಂಬ ಶೀರ್ಷಿಕೆಯಲ್ಲಿ ಈ ವರ್ಷದ ಓಟ 'ನನ್ನ ಆರೋಗ್ಯ ನನ್ನ ಹಕ್ಕು' ಎಂಬ ಘೋಷವಾಕ್ಯದೊಂದಿಗೆ ನಡೆದಿದೆ ಎಂದರು.



ಚಿಕ್ಕಬಳ್ಳಾಪುರದ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯ ಹಮ್ಮಿಕೊಂಡಿದ್ದ 'ಬಿ.ಜಿ.ಎಸ್ ನಂದಿ ಓಟ 2024' ಸ್ಪರ್ಧೆಯಲ್ಲಿ ಗಣ್ಯರ ಓಟದ ಝಲಕ್




ಚಿಕ್ಕಬಳ್ಳಾಪುರದ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯ ಹಮ್ಮಿಕೊಂಡಿದ್ದ 'ಬಿ.ಜಿ.ಎಸ್ ನಂದಿ ಓಟ 2024' ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ನೀಡಲಾಯಿತು